**ಪಾಠ-10** **ಆಗಸ್ಟ್ 28-ಸೆಪ್ಟೆಂಬರ್ 34**

# ಸಬ್ಬತ್ತಿನ ವಿಶ್ರಾಂತಿ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಅಧ್ಯಯನಕ್ಕಾಗಿ ಓದಿರಿ :** ಆ.ಕಾಂಡ 1:26,27; ಆ.ಕಾಂಡ 9:6, 2 ಪೇತ್ರ 2:19, ರೋಮ 6:1–7, ವಿ.ಕಾಂಡ 19:6, ಯೋಹಾನ 5:7–16.

**ಸ್ಮರಣವಾಕ್ಯ : "ಆರುದಿನಗಳಲ್ಲಿ ನೀವು ಕೆಲಸಗಳನ್ನು ನಡಿಸಬೇಕು ಏಳನೆಯ ದಿನವು ಯಾವ ಕೆಲಸವನ್ನು ಮಾಡಕೂಡದ ಸಬ್ಬತ್‌ದಿನವಾಗಿದೆ ಅದರಲ್ಲಿ ದೇವಾರಾಧನೆಗಾಗಿ ಸಭೆ ಕೂಡಬೇಕು. ಆ ದಿನದಲ್ಲಿ ಯಾವ ವಿಧವಾದ ಕೆಲಸವನ್ನು ಮಾಡಕೂಡದು. ನಿಮ್ಮ ಎಲ್ಲಾ ನಿವಾಸಸ್ಥಳಗಳಲ್ಲಿ ಅದು ಯೆಹೋವನಿಗೆ ಮೀಸಲಾದ ವಿಶ್ರಾಂತಿ ದಿನವಾಗಿದೆ"** (ಯಾಜಕಕಾಂಡ 23:3).

ಏಳನೆಯ ದಿನದ ಸಬ್ಬತ್ತಿನ ಆಚರಣೆಗೆ ವಿರುದ್ಧವಾದ ಎಲ್ಲಾ ತರದ ವಾದಗಳನ್ನು ನಾವು ಕೇಳುತ್ತೇವೆ. ಅಲ್ಲವೇ? ಯೇಸುಕ್ರಿಸ್ತನು ಸಬ್ಬತ್ತನ್ನು ಭಾನುವಾರಕ್ಕೆ ಬದಲಾಯಿಸಿದನೆಂದು ಅಥವಾ ಆತನು ಸಬ್ಬತ್ತನ್ನು ರದ್ದುಪಡಿಸಿದನೆಂದು ಅಥವಾ ಪೌಲನು ಹಾಗೆ ಮಾಡಿದನೆಂದು, ಇಲ್ಲವೇ ಅಪೋಸ್ತಲರು ಪುನರುತ್ಥಾನದ ಗೌರವಾರ್ಥವಾಗಿ ಏಳನೆಯ ದಿನದ ಸಬ್ಬತ್ತನ್ನು ಒಂದನೇ ದಿನಕ್ಕೆ ಭಾನುವಾರಕ್ಕೆ ಬದಲಾಯಿಸಿದರೆಂದು ಹೀಗೆ ಹೇಳುತ್ತಾ ಹೋಗುತ್ತಾರೆ. ಇತ್ತೀಚಿನ ವರುಷಗಳಲ್ಲಿ ಇನ್ನೂ ಸೂಕ್ಷ್ಮವಾದ ಕೆಲವು ವಾದಗಳು ಬಂದಿವೆ, ಉದಾಹರಣೆಗೆ ಯೇಸುಕ್ರಿಸ್ತನೇ ನಮಗೆ ಸಬ್ಬತ್ತಿನ ವಿಶ್ರಾಂತಿ ಆದುದರಿಂದ ಯಾವ ದಿನದಲ್ಲೂ ಅಥವಾ ಪರಿಶುದ್ಧ

---

**ಈ ಪಾಠವನ್ನು ಸೆಪ್ಟೆಂಬರ್ 4ರ ಸಬ್ಬತ್ತಿಗೆ ಅಧ್ಯಯನ ಮಾಡಿ ಸಿದ್ಧಪಡಿಸಿಕೊಳ್ಳಿರಿ.**

ದಿನದಲ್ಲೂ ವಿಶ್ರಾಂತಿ ದಿನವಾಗಿ ಕೈಗೊಳ್ಳುವ ಅಗತ್ಯವಿಲ್ಲವೆಂದು ವಾದ ಮಾಡುತ್ತಾರೆ? ಖಂಡಿತವಾಗಿಯೂ, ವಾದಗಳು (ಆಕ್ಷೇಪಗಳು) ಯಾವಾಗಲೂ ಇರುತ್ತವೆ. ಇನ್ನೂ ವಿಚಿತ್ರವಾದ ವಾದವೇನೆಂದರೆ ನಾವು ಏಳನೇ ದಿನದ ಸಬ್ಬತ್ತನ್ನು ಕೈಗೊಂಡು ನಡೆಯುವಾಗ ನಮ್ಮ ರಕ್ಷಣೆಯನ್ನು ಸ್ವಂತ ನೀತಿಯಿಂದ ಸಾಧಿಸಿಕೊಳ್ಳುವ ಪ್ರಯತ್ನವೆಂದು ಸಬ್ಬತ್ತನ್ನು ಅಲ್ಲಗಳೆಯುತ್ತಾರೆ.

ಅವಶ್ಯಕವಾಗಿ, ಅಡ್ವೆಂಟಿಸ್ಟರಾದ ನಾವು ದೇವರ ನ್ಯಾಯಪ್ರಮಾಣದ ನಿರಂತರತೆ (ಎಂದೆಂದಿಗೂ ನೀತಿಯಾಗಿರುವಂಥದ್ದು)ಯನ್ನು ಅರಿತಿದ್ದೇನೆ. ಆದುದರಿಂದ ನಾಲ್ಕನೇ ಆಜ್ಞೆಗೆ ವಿಧೇಯರಾಗಿ ಜೀವಿಸುವುದು ಎಂದಿಗೂ ನಮ್ಮ ಸ್ವನೀತಿಯಿಂದ ಪರಲೋಕ ಪಡೆಯುವ ಪ್ರಯತ್ನವಲ್ಲ ಇನ್ನುಳಿದ ಒಂಭತ್ತು ಆಜ್ಞೆಗಳಿಗೆ ವಿಧೇಯರಾಗುವಂತೆ ಇದಕ್ಕೂ ವಿಧೇಯರಾಗಬೇಕು ಅಷ್ಟೆ.

ಈವಾರ ನಾವು ದೇವರು ಸಬ್ಬತ್ತಿನ ಆಜ್ಞೆಯ ಮೂಲಕ ಕೊಟ್ಟು ವಿಶ್ರಾಂತಿಯ ಬಗ್ಗೆ ಹೆಚ್ಚಾಗಿ ಕಲಿಯುತ್ತೇವೆ.

**ಭಾನುವಾರ** **ಆಗಸ್ಟ್ 29**

## ಸಬ್ಬತ್ತು ಮತ್ತು ಸೃಷ್ಟಿ

ಹತ್ತು ಆಜ್ಞೆಗಳಲ್ಲಿ ನಾಲ್ಕನೇ ಆಜ್ಞೆಯಲ್ಲಿ ಮಾತ್ರ ಜ್ಞಾಪಕದ್ದಲ್ಲಿಟ್ಟುಕೋ ಎಂಬ ಕ್ರಿಯಾಪದವು ಬರುತ್ತದೆ. ಕಳ್ಳತನ ಮಾಡಬೇಡ ಎಂಬ ಆಜ್ಞೆಯಲ್ಲಿ ಕಳ್ಳತನ ಮಾಡಬೇಡ ಜ್ಞಾಪಕದಲ್ಲಿಟ್ಟುಕೋ ಎಂಬ ಎಚ್ಚರಿಕೆಯ ಪದವಿಲ್ಲ. ಮತ್ತೊಬ್ಬನ ಮನೆಯನ್ನು ಆಶಿಸಬಾರದು ಜ್ಞಾಪಕದ್ದಲಿಟ್ಟುಕೊಳ್ಳಬೇಕು ಎಂಬುದಾಗಿಲ್ಲ. ನಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕು ಎಂದು ಹೇಳಿರುವುದು ಸಬ್ಬತ್ತಿನ ಆಜ್ಞೆಯಲ್ಲಿ ಮಾತ್ರ.

'ಜ್ಞಾಪಕದಲ್ಲಿಟ್ಟುಕೋ' ಎಂಬ ಆಲೋಚನೆ ಚರಿತ್ರೆಯ ಹಿನ್ನೆಲೆಯನ್ನು ಪರಿಭಾವಿಸುವಂತೆ ಮಾಡುತ್ತದೆ. ಚರಿತ್ರೆಯಲ್ಲಿ ನಡೆದಿರುವುದನ್ನು ನಾವು ಸರಿಯಾಗಿ ನೆನಪಿನಲ್ಲಿಟ್ಟುಕೊಳ್ಳುವ ಅಗತ್ಯವನ್ನು ಹೇಳುತ್ತದೆ. ಹಾಗೆ ನಾವು ಜ್ಞಾಪಕದಲ್ಲಿಟ್ಟು-ಕೊಳ್ಳುವುದು ನಮ್ಮನ್ನು ಹಿಂದೆ ನಡೆದ ಘಟನೆಗಳಿಗೆ ಸಂಬಂಧಪಡಿಸುತ್ತದೆ. ಹಾಗಾಗಿ ಸಬ್ಬತ್ ದಿನವನ್ನು ಪರಿಶುದ್ಧ ದಿನವಾಗಿ ಆಚರಿಸಲು ಜ್ಞಾಪಕದಲ್ಲಿಟ್ಟುಕೊಳ್ಳಬೇಕೆಂಬುದು ಸೃಷ್ಟಿಕಾರ್ಯ ನಡೆದ ವಾರಕ್ಕೆ ನೇರವಾದ ಗೆರೆಯನ್ನು ಎಳೆಯುತ್ತದೆ. ಆದಿಕಾಂಡ

1:26,27 ಮತ್ತು ಆದಿಕಾಂಡ 9:6ನ್ನು ಓದಿರಿ. ಮನುಷ್ಯರಾದ ನಾವು ಹೇಗೆ ಆಮೂಲಾಗ್ರವಾಗಿ ವಿಶೇಷವಾದವರು ಎಂಬುದರ ಬಗ್ಗೆ ಈ ವಚನಗಳು ಏನನ್ನು ಬೋಧಿಸುತ್ತವೆ?

ನಾವು ವೈಚಾರಿಕವಾಗಿ ಉಳಿದೆಲ್ಲಾ ಭೂಜಂತುಗಳಿಗಿಂತ ಹೇಗೆ ಭಿನ್ನರಾಗಿದ್ದೇವೆ? ಮತ್ತು ಈ ವಿಶೇಷಯನ್ನು ನಾವು ಅರ್ಥ ಮಾಡಿಕೊಂಡಿರುವುದು ಬಹಳ ಮುಖ್ಯ ಏಕೆ?

ನಾವು ಸೃಷ್ಟಿಯನ್ನು ನೆನಪುಮಾಡಿಕೊಳ್ಳುವಾಗ ನಾವು ದೇವರ ಸಾರೂಪ್ಯದಲ್ಲಿ ಸೃಷ್ಟಿಗೊಂಡಿದ್ದೇವೆ ಈ ಸಾರೂಪ್ಯದಲ್ಲಿ ಇನ್ನಿತರ ಯಾವುದೇ ಜೀವಿಗಳೂ ಸೃಷ್ಟಿಯಾದ ವಿವರಣೆ ಸಿಗುವುದಿಲ್ಲ. ಆದುದರಿಂದ ಮಾನವ ಜೀವಿಗಳು ಈ ಗ್ರಹದ ಮೇಲಿರುವ ಎಲ್ಲಾ ಜೀವಿಗಳಿಗಿಂತ ಆಮೂಲಾಗ್ರವಾಗಿ ಭಿನ್ನರಾಗಿದ್ದೇವೆ (ನಾವು ಇತರ ಪ್ರಾಣಿಗಳ ಡಿ.ಎನ್.ಎ. ಸಂಖ್ಯೆಯಲ್ಲಿ ಸಾಮಾನ್ಯತೆಯಿದ್ದರೂ ಸಂಪೂರ್ಣವಾಗಿ ಭಿನ್ನರಾಗಿದ್ದೇವೆ). ಇದಕ್ಕೆ ಪ್ರತಿಯಾಗಿ ಜನಪ್ರಿಯ ಮಿಥ್ಯವು ಮನುಷ್ಯರು ವಿಕಸನ ಹೊಂದಿದ ಕೋತಿಗಳು ಅಥವಾ ಬಹಳವಾಗಿ ವಿಕಸನ ಹೊಂದಿದ ಪುರಾತನ ಸಸ್ತನಿಗಳು (ಹಾಲೂಡುವ ಪ್ರಾಣಿ) ಎಂದು ಹೇಳುತ್ತದೆ. ನಾವು ದೇವರ ಹೋಲಿಕೆಗೆ ಸರಿಯಾಗಿ ಸೃಷ್ಟಿಸಲ್ಪಟ್ಟಿದ್ದು ದೇವರು ಈ ಲೋಕದಲ್ಲಿ ಸೃಷ್ಟಿಸಿದ ಎಲ್ಲಾ ಜೀವಿಗಳಿಗಿಂತಲೂ ವಿಶಿಷ್ಟವಾದ ಜೀವಿಗಳಾಗಿದ್ದೇವೆ.

ಸೃಷ್ಟಿಯ ಕಥೆಯು ನಾವು ಹೇಗೆ ಸೃಷ್ಟಿಗಿಎ ಸಂಬಂಧಪಡುತ್ತೇವೆ ಎಂಬುದನ್ನು ನೆನಪಿಗೆ ತರುತ್ತದೆ? ಆದಿಕಾಂಡ 2:15,19.

ದೇವರು ಸೃಷ್ಟಿಯನ್ನು ನೋಡುವಾಗ ಈ ಸೃಷ್ಟಿಯ ಮೇಲೆ ನಮಗೆ ಒಂದು ಜವಾಬ್ದಾರಿಯನ್ನು ಕೊಟ್ಟಿರುವುದನ್ನು ನೆನಪಿಗೆ ತರುತ್ತದೆ. ನಾವು ಇದರ ಮೇಲೆ ದೊರೆತನ ಮಾಡಬೇಕೆಂದು ನಮ್ಮನ್ನು ನೇಮಿಸಿದ್ದಾನೆ. ದೊರೆತನ ಮಾಡುವುದು ಎಂದರೆ ದಬ್ಬಾಳಿಕೆ ಮಾಡುವುದು ಶೋಷಣೆ ಮಾಡುವುದು ಎಂದು ಅರ್ಥಮಾಡಿಕೊಳ್ಳಬಾರದು. ನಾವು ದೇವರ ಪ್ರತಿನಿಧಿಗಳಂತೆ ಇದರ ಮೇಲೆ ಒಡೆತನ ಮಾಡಬೇಕು. ನಾವು ನಿಸರ್ಗದೊಡನೆ ದೇವರು ಸಂವಾದ ಮಾಡುವ ಹಾಗೆಯೇ ಮಾಡಬೇಕು.

ಹೌದು, ಪಾಪವು ಎಲ್ಲವನ್ನು ಕೆಡಿಸಿ ಅಸ್ತವ್ಯಸ್ತ ಮಾಡಿದೆ ಆದರೆ ಈ ಭೂಮಿಯೂ ಈಗಲೂ ದೇವರ ಸೃಷ್ಟಿ, ಹಾಗಾಗಿ ಇದನ್ನು ಕೆಡಿಸುವ ಹಕ್ಕು ನಮಗಿಲ್ಲ, ವಿಶೇಷವಾಗಿ ನಮ್ಮ ಸಹಜೀವಿಗಳಿಗೆ (ಮನುಷ್ಯರಿಗೆ) ಹಾನಿ ಮಾಡಬಾರದು. ಸಬ್ಬತ್ತು ಕೈಗೊಂಡು ನಡೆಯುವಾಗ ನಾವು ದೇವರನ್ನು ನಮ್ಮ ಸೃಷ್ಟಿಕರ್ತನೆಂದು ಗೌರವಿಸುವುದರ ಜೊತೆಗೆ ನಾವು ಹೇಗೆ ನಮ್ಮ ಪರಿಸರದ ಪಾರುಪತ್ಯಗಾರರು ಎಂಬ ಪ್ರಜ್ಞೆಯನ್ನು ಹೆಚ್ಚಿಸುತ್ತದೆ?

**ಸೋಮವಾರ** **ಆಗಸ್ಟ್ 30**

## ಸ್ವಾತಂತ್ರ್ಯದ ಸಂಭ್ರಮಾಚರಣೆ

ನಾವು ಈ ಮೊದಲು ನೋಡಿದಂತೆ ಸಬ್ಬತ್ತು ಸೃಷ್ಟಿಯ ದಿನಗಳನ್ನು ಸೂಚಿಸುವುದಕ್ಕಿಂತ ಹೆಚ್ಚಿನದನ್ನು ತಿಳಿಸುತ್ತದೆ. ಸತ್ಯವೇದದಲ್ಲಿ ಮೋಶೆಯು ಇಸ್ರಾಯೇಲ್ಯರ ನಲವತ್ತು ವರುಷಗಳ ಜೀವಿತವನ್ನು ಅವಲೋಕನ ಮಾಡುವಾಗ ಹೇಳಲ್ಪಟ್ಟವು. ಈವಾಗ ಸಬ್ಬತ್ತನ್ನು ಪರಿಶುದ್ಧವೆಂದು ಆಚರಣೆಗೆ ತರುವುದು ಸೃಷ್ಟಿಕಾರ್ಯಗಳ ನೆನಪಿಗಲ್ಲ. ಆದರೆ ಐಗುಪ್ತದೇಶದ ದಾಸತ್ವದಿಂದ ಸಿಕ್ಕಿದ ಬಿಡುಗಡೆಗೆ (ಧ.ಕಾಂಡ 5:12–15).

ನಾವು ಇಂದು ಐಗುಪ್ತದ ದಾಸತ್ವದಲ್ಲಿ ಇಲ್ಲದಿರಬಹುದು. ಆದರೆ ನಾವೆಲ್ಲರೂ ಇನ್ನೊಂದು ಬಗೆಯ ನಮ್ಮನ್ನು ತುಳಿಯುವಂತಹ ದಾಸತ್ವದಲ್ಲಿದ್ದೇವೆ.

ಈ ದಿನ ನಾವು ಎದುರಿಸುತ್ತಿರುವ ದಾಸತ್ವದ ಇತರೆ ರೂಪಗಳ್ಯಾವುವು? ಆದಿಕಾಂಡ 4:7, ಇಬ್ರಿಯ 12:1 ಮತ್ತು 2 ಪೇತ್ರ 2:19 ಈ ವಚನಗಳನ್ನು ಓದಿರಿ.

ನಮ್ಮನ್ನು ದಾಸತ್ವಕ್ಕೆ ಒಳಪಡಿಸುವ ಎಲ್ಲವುಗಳಿಂದ ಬಿಡುಗಡೆ ಹೊಂದುವುದೇ ಸಬ್ಬತ್ತಿನ ಆಚರಣೆಯಾಗಿದೆ. ಸಬ್ಬತ್ತಿನಲ್ಲಿ ನಾವು ಪಾಪ ಮುಕ್ತರಾಗಿದ್ದೇವೆ ಎಂಬುದನ್ನು ನೆನಪಿಗೆ ತಂದುಕೊಳ್ಳುತ್ತೇವೆ. ಇದು ನಮ್ಮಿಂದ ಸಾಧ್ಯವಿಲ್ಲ. ದೇವರ ಶಕ್ತಿಯಿಂದ ಮತ್ತು ಅದರ ಮೇಲೆ ನಾವು ನಂಬಿಕೆ ಇಡುವುದರಿಂದ ಸಾಧ್ಯ ಮತ್ತು ಈ ಬಿಡುಗಡೆಯು ನಾವು ಸಂಪಾದಿಸಿಕೊಂಡಿದ್ದಲ್ಲ. ಇಸ್ರಾಯೇಲ್ಯರ ಚೊಚ್ಚಲ ಮಕ್ಕಳು ಸಾಯದೆ ಉಳಿದದ್ದು ಬಾಗಿಲ ಮೇಲೆ ಹಚ್ಚಿದ ರಕ್ತದಿಂದ (ವಿ.ಕಾಂಡ 12ನೇ

ಅಧ್ಯಾಯ) ಇಂದು ನಾವು ಸಹಾ ಉಳಿದಿರುವುದು ಯಜ್ಞದ ಕುರಿಯಾದಾತನ ರಕ್ತದಿಂದ. ಆದ್ದರಿಂದ ನಾವು ನಮ್ಮ ಯೇಸುಕ್ರಿಸ್ತನಲ್ಲಿ ದೊರಕಿದ ಸ್ವಾತಂತ್ರ್ಯದಲ್ಲಿ ನಡೆಯಬೇಕು (ರೋಮನ್ಸ್ 6:1–7 ವಾಕ್ಯಗಳನ್ನು ಓದಿರಿ). ಇಲ್ಲಿರುವ ಪೌಲನ ಹೇಳಿಕೆಯನ್ನು ನಮಗೆ ಸಬ್ಬತ್ತಿನ ಮೂಲಕ ಕೊಡಲ್ಪಟ್ಟಿರುವುದಕ್ಕೆ ಹೇಗೆ ಸಂಬಂಧ ಕಲ್ಪಿಸಬಹುದು?

ಧರ್ಮೋಪದೇಶಕಾಂಡ 5:15ನೇ ವಚನದಲ್ಲಿ ಇರುವ ಪದಗಳು ಹೀಗೆ ಹೇಳುತ್ತವೆ "ಐಗುಪ್ತದೇಶದಲ್ಲಿ ನೀವು ದಾಸತ್ವದಲ್ಲಿದ್ದುದ್ದನ್ನೂ ನಿಮ್ಮ ದೇವರಾದ ಯೆಹೋವನು ಭುಜಪರಾಕ್ರಮದಿಂದಲೂ ಶಿಕ್ಷಾ ಹಸ್ತದಿಂದಲೂ ನಿಮ್ಮನ್ನು ಬಿಡುಗಡೆ ಮಾಡಿದ್ದನ್ನೂ ಜ್ಞಾಪಕ ಮಾಡಿಕೊಳ್ಳಿರಿ". ಜನರು ಅವರ ಬಿಡುಗಡೆಯು ದೇವರು ಅವರ ಪರವಾಗಿ ಮಾಡಿದ ಕೆಲಸವೆಂದು ಅರಿತುಕೊಂಡರು. ಕ್ರೈಸ್ತರಾದ ನಮಗೆ ಇಂದು ನಮ್ಮ ಪಾಪಗಳಿಂದ ಬಿಡುಗಡೆಯಾಗಿರುವುದು ಯೇಸುಕ್ರಿಸ್ತನ ಶಕ್ತಿಯಿಂದ ಮತ್ತು ಕೆಲಸದಿಂದ ಎಂದು ಎಷ್ಟೋ ಹೆಚ್ಚಾಗಿ ಅರಿತುಕೊಳ್ಳಬೇಕಾಗಿದೆಯಲ್ಲವೇ? ನಾವು ದೇವರು ತನ್ನ ಶಿಕ್ಷಾ ಹಸ್ತದಿಂದ ಸಂಪಾದಿಸಿಕೊಟ್ಟ ರಕ್ಷಣೆ (ಬಿಡುಗಡೆಯಲ್ಲಿ) ವಿಶ್ರಾಂತಿ ಪಡೆದುಕೊಳ್ಳಬೇಕೆಂದು ಈ ಆಜ್ಞೆ ಹೇಳುತ್ತದೆ. ನಾವು ನಮ್ಮ ಸ್ವನೀತಿಯ ಮೇಲೆ ಆತುಕೊಳ್ಳದೆ ನಮ್ಮ ದೇವರನ್ನು ಸೃಷ್ಟಿಕರ್ತನೆಂದು ಮತ್ತು ನಮ್ಮನ್ನು ಮರುಸೃಷ್ಟಿ ಮಾಡುವವನೆಂದು, ನಮ್ಮನ್ನು ಎಲ್ಲಾ ಪಾಪಗಳಿಂದ ಬಿಡಿಸುವವನೆಂದು ಈ ಆಜ್ಞೆಯು ನಮಗೆ ನೆನಪಿಸುತ್ತದೆ. ಪಾಪದ ದಾಸತ್ವದ ಬಗ್ಗೆ ನಿಮ್ಮ ಸ್ವಂತ ಅನುಭವ ಏನಾಗಿದೆ? ನಾವು ದಾಸತ್ವದಿಂದ ಯೇಸುಕ್ರಿಸ್ತನಲ್ಲಿ ಸಿಗುವ ಬಿಡುಗಡೆಯು ವಾಗ್ದಾನಗಳಿಗೆ ಹೇಗೆ ನಮ್ಮನ್ನು ಯೋಗ್ಯರನ್ನಾಗಿ ಮಾಡಿಕೊಳ್ಳಲು ಕಲಿಯಬಹುದು?

**ಮಂಗಳವಾರ** **ಆಗಸ್ಟ್ 31**

## ಊರು ಬಾಗಲಿನಲ್ಲಿರುವ ಪರದೇಶಸ್ಥ

ವಿ.ಕಾಂಡ 19:6ನೇ ವಚನ ಓದಿರಿ. ಇಸ್ರಾಯೇಲ್ಯರ ಸ್ಥಾನಮಾನದ ಬಗ್ಗೆ ಈ ವಚನವು ನಮಗೆ ಏನು ಹೇಳುತ್ತದೆ? (1 ಪೇತ್ರ 2:9ನ್ನು ಸಹಾ ನೋಡಿರಿ).

ಇಸ್ರಾಯೇಲ್ಯರು ದೇವರ ಒಡಂಬಡಿಕೆಯ ಜನರಾಗಿ ಜೀವಿಸಲು ಐಗುಪ್ತದೇಶದಿಂದ ಹೊರಕ್ಕೆ ಕರೆಯಲ್ಪಟ್ಟರು. ಇವರು ದೇವರಿಗೆ ನಂಬಿಗಸ್ತರಾಗಿ ಉಳಿದಿದ್ದರೆ, ಸುವಾರ್ತೆಯು ಇವರ ಮೂಲಕ ಇಡೀ ಲೋಕಕ್ಕೆ ಪ್ರಸಾರವಾಗುತ್ತಿತ್ತು.

ನಿಸ್ಸಂದೇಹವಾಗಿ ಅವರು ದೇವರ ವಿಶೇಷವಾದ ಪರಾಂಬರಿಕೆ ಮತ್ತು ಕಾಳಜಿಯಲ್ಲಿದ್ದರು, ಅವರಿಗೆ ವಿಶೇಷವಾದ ಸವಲತ್ತುಗಳು ಕೊಡಲ್ಪಟ್ಟಿದ್ದವು ಜೊತೆಗೆ ಕೆಲವು ವಿಶೇಷವಾದ ಜವಾಬ್ದಾರಿಗಳು ಸಹ ಅವರ ಮೇಲಿದ್ದವು.

ವಿಮೋಚನಕಾಂಡ 23:12ನ್ನು ಓದಿರಿ ಇಲ್ಲಿ ಮತ್ತೇನು ನಡೆಯುತ್ತಿದೆ. ದೇವರು ಇಸ್ರಾಯೇಲ್ಯರ ವಿಷಯದಲ್ಲಿ ಮಾತ್ರವಲ್ಲದೆ ಅನ್ಯರ ವಿಷಯದಲ್ಲಿ ಹೇಗೆ ನಡೆದುಕೊಳ್ಳುತ್ತಾನೆ?

ಸಬ್ಬತ್ತಿನ ಸಾರ್ವಕಾಲಿಕತೆಯನ್ನು ಜನರು ಅನುಭವಿಸಲಾರದೆ ಅದರಿಂದ ತಪ್ಪಿಸಿಕೊಳ್ಳುತ್ತಿದ್ದಾರೆ. ಖಂಡಿತವಾಗಿಯೂ ಸಾಮಾನ್ಯವಾದ ಒಂದು ದೊಡ್ಡ ತಪ್ಪು ಏನೆಂದರೆ ಸಬ್ಬತ್ತು ಯೆಹೂದಿಗಳಿಗೆ ಮಾತ್ರವೆಂಬುದು. ಇದು ತಪ್ಪೆಂದು ಆದಿಕಾಂಡದ ಮೊದಲೆರಡು ಅಧ್ಯಾಯಗಳು ನಮಗೆ ಹೇಳುತ್ತವೆ. ದೇವರು ಸರ್ವಜನಾಂಗವನ್ನು ಸೃಷ್ಟಿಸಿರುವುದರಿಂದ ಎಲ್ಲರೂ ಸಬ್ಬತ್ತಿನ ದಿನವನ್ನು ಆಚರಣೆಗೆ ತರುವುದಕ್ಕೆ ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ನಾವು ಯಾವಾಗಲೂ ಸಬ್ಬತ್ತು ಏನನ್ನು ಪ್ರತಿನಿಧಿಸುತ್ತದೆ ಎಂಬುದನ್ನು ನಮ್ಮ ಮನಸ್ಸಿನಲ್ಲಿಟ್ಟುಕೊಂಡಿರುತ್ತೇವೆ, ಇದು ಇತರರ ಬಗ್ಗೆಯೂ ನಮಗೆ ಏನನ್ನು ಹೇಳುವಂಥದ್ದಾಗಿದೆ. ನಾವು ನಮ್ಮ ದೇವರ ಆಜ್ಞೆಯಂತೆ ವಿಶ್ರಾಂತಿ ಹೊಂದುವಾಗ ನಮ್ಮನ್ನು ನಮ್ಮ ವಿಮೋಚಕನೂ ಸೃಷ್ಟಿಕರ್ತನೂ ಆದ ದೇವರಿಗೆ ಸಂಬಂಧಿಸಿಕೊಳ್ಳುತ್ತೇವೆ. ಇದು ನಮ್ಮನ್ನು ಸಹಜವಾಗಿ ಇತರರ ಮೇಲೆ ಹೊಸ ದೃಷ್ಟಿಹರಿಸುವಂತೆ ಮಾಡುತ್ತದೆ.

ಇತರರೂ ಸಹಾ ಒಂದೇ ದೇವರಿಂದ ಸೃಷ್ಟಿಸಲ್ಪಟ್ಟವರು, ನಮ್ಮನ್ನು ಪ್ರೀತಿಸುವ ದೇವರೇ ಇತರರನ್ನು ಸಹ ಪ್ರೀತಿಸುತ್ತಾನೆ. ನಮಗಾಗಿ ಸತ್ತವನೇ ಇತರರಿಗಾಗಿಯೂ ಸತ್ತನು. ನಾವು (ವಿ.ಕಾಂಡ 20:10 ಮತ್ತು ಧ.ಕಾಂಡ 5:14). ಈ ವಚನಗಳಲ್ಲಿ ನೋಡಿದಂತೆ, ಸೇವಕರು (ಗುಲಾಮರು), ಪರದೇಶಸ್ಥರು ಮಾತ್ರವಲ್ಲದೆ ಎತ್ತು ಕತ್ತೆ ಮುಂತಾದ ಶ್ರಮಿಕ ಪ್ರಾಣಿಗಳಿಗೂ 'ವಿಶ್ರಾಂತಿ' ಕೊಡಬೇಕು.

ಇಸ್ರಾಯೇಲ್ಯರ ಊರು ಬಾಗಲಿನೊಳಗಿರುವ ಪರದೇಶಸ್ಥರು ಅವರ ಒಡಂಬಡಿಕೆಯ ವಾಗ್ದಾನಗಳಿಗೆ ಬಾಧ್ಯಸ್ಥರಲ್ಲದಿದ್ದರೂ ಅವರು ಪಡೆಯುವ ಸಬ್ಬತ್ತಿನ ವಿಶ್ರಾಂತಿಯಲ್ಲಿ ಭಾಗಿಯಾಗಬೇಕಿತ್ತು. ಮನುಷ್ಯರು ಪ್ರಾಣಿಗಳು ಯಾರು ಸಹಾ ಶೋಷಣೆಗೆ ಗುರಿಯಾಗಬಾರದು.

ಅವುಗಳನ್ನು ಕೆಟ್ಟದಾಗಿ ನಡೆಸುಕೊಳ್ಳಬಾರದು. ಮನುಷ್ಯರಾದ ನಾವೆಲ್ಲರೂ ಪರಸ್ಪರ ಒಂದೇ ಸ್ವಭಾವದವರಾಗಿದ್ದು ಅನೇಕ ವಿಷಯಗಳಲ್ಲಿ ಸಾಮ್ಯತೆ ಹೊಂದಿದ್ದೇವೆ. ನಾವು ಭೋಗಿಸುವ ಸೌಲಭ್ಯಗಳು ಸವಲತ್ತುಗಳು ಅವರಿಗಿಲ್ಲದಿದ್ದರೂ ನಾವು ಯಾವಾಗಲೂ ಮಾನವ ಕುಟುಂಬದ ಸದಸ್ಯರು ಎಂಬುದನ್ನು ಯಾವಾಗಲೂ ನೆನಪಿನಲ್ಲಿಡಬೇಕು. ಹಾಗಾಗಿ ನಾವು ಇತರರನ್ನು ಗೌರವದಿಂದ ಮರ್ಯಾದೆಯಿಂದ ಕಾಣಬೇಕು.

ನೀವು ಸಬ್ಬತ್ತನ್ನು ಕೈಗೊಂಡು ನಡೆಯುವಾಗ, ನಡೆಯದವರಿಗೆ ಹೇಗೆ ಆಶೀರ್ವಾದವನ್ನು ತರುವಂಥದ್ದಾಗಿದೆ? ಅಂದರೆ ಸಬ್ಬತ್ತನ್ನು ಇತರರಿಗೆ ಸಾಕ್ಷಿಯಾಗಿರುವಂತೆ ಹೇಗೆ ಉಪಯೋಗಿಸುವಿರಿ?

**ಬುಧವಾರ** **ಸೆಪ್ಟೆಂಬರ್ 1**

## ಇತರರಿಗೆ ಮಾಡುವ ಸೇವೆಯಿಂದ ದೇವರ ಸಬ್ಬತ್ತಿಗೆ ಘನತೆ

ಹೊಸ ಒಡಂಬಡಿಕೆಯ ಕಾಲದಲ್ಲಿ ಧಾರ್ಮಿಕ ನಾಯಕರು ಸಬ್ಬತ್ತನ್ನು ಬಹಳ ಕಟ್ಟುನಿಟ್ಟಾಗಿ ಶ್ರದ್ಧೆಯಿಂದ ಕೈಗೊಳ್ಳುತ್ತಿದ್ದರು. ಸಬ್ಬತ್ತನ್ನು ಪರಿಶುದ್ಧ ದಿನವಾಗಿ ಪ್ರತಿಷ್ಠೆ ಪಡಿಸಲು ಹತ್ತಾರು ನಿಷೇಧಗಳು ಕಟ್ಟುಕ್ರಮಗಳು ಜಾರಿಯಲ್ಲಿದ್ದವು.

ಯಾವುದನ್ನಾದರೂ ಕಟ್ಟುವುದು ಇಲ್ಲವೇ ಬಿಚ್ಚುವುದು, ಎರಡು ನೂಲುಗಳನ್ನು ಪ್ರತ್ಯೇಕಿಸುವುದು, ಉರಿಯುವ ದೀಪವನ್ನು ಆರಿಸುವುದು, ಮನೆಯಿಂದ ಹೊರಕ್ಕೆ ಸಾರ್ವಜನಿಕ ಸ್ಥಳಕ್ಕೆ ಏನಾದರೊಂದು ವಸ್ತುವನ್ನು ಸಾಗಿಸುವುದು, ದೂರಕ್ಕೆ ಒಯ್ಯುವುದು ಮುಂತಾದವುಗಳ ಮೇಲೆ ನಿಷೇಧ ಹೇರಲಾಗಿತ್ತು.

ಯೋಹಾನ 5:7–16ರಲ್ಲಿ ಯೇಸುಕ್ರಿಸ್ತನ ಮೇಲೆ ಯಾವ ಆಪಾದನೆ ಮಾಡಲಾಯ್ತು?

ಯೇಸುಕ್ರಿಸ್ತನು ಬಹಳ ವರ್ಷಗಳಿಂದ ಬಿದ್ದುಕೊಂಡಿದ್ದ ರೋಗಿಯನ್ನು ಅದ್ಭುತಕರವಾಗಿ ಗುಣಪಡಿಸಿದ್ದಕ್ಕೆ ಹೆಚ್ಚಳ ಪಡದೆ ಅದನ್ನು ಸಂಪೂರ್ಣವಾಗಿ ತಾತ್ಸಾರ ಮಾಡಿ ಧಾರ್ಮಿಕ ನಾಯಕರು ತಮ್ಮ ಕಟ್ಟುಪಾಡುಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಗುಂಗಿನಲ್ಲಿದ್ದರು.

ಸಬ್ಬತ್ತಿಗೆ ಒಡೆಯನಾದ ಯೇಸುಕ್ರಿಸ್ತನು (ಮಾರ್ಕ 2:28) ಆ ವಿಶೇಷವಾದ ದಿನವನ್ನು ಒಳ್ಳೆಯದಕ್ಕಾಗಿ ಉಪಯೋಗಿಸಿದನು ಎನ್ನದೆ ಗುಣವಾದ ವ್ಯಕ್ತಿಯು ಸಾರ್ವಜನಿಕವಾಗಿ ತನ್ನ ಹಾಸಿಗೆ ಹೊತ್ತುಕೊಂಡು ಹೋಗುತ್ತಿದ್ದುದಕ್ಕೆ ಬಹಳ ಆಕ್ಷೇಪ ವ್ಯಕ್ತಪಡಿಸಿದರು. ನಾವು ಕೂಡ ನಮ್ಮದೇ ಆದ ರೀತಿಯಲ್ಲಿ ಇಂತಹ ತಪ್ಪುಗಳನ್ನು ಮಾಡದ ಹಾಗೆ ಎಚ್ಚರಿಕೆ ವಹಿಸಬೇಕು.

ಯೆಶಾಯ 58:12–14 ವಚನಗಳು ಹೇಗೆ ಸಬ್ಬತ್ತನ್ನು ಕೈಗೊಂಡು ನಡೆಯುವ ದೇವರ ಕಾರ್ಯಸೂಚಿಯ ರೂಪರೇಖೆಯನ್ನು ಹೊಂದಿದೆ?

ದೇವರಿಗೆ ನಮ್ಮ ಬರಿದಾದ ಆರಾಧನೆಯಾಗಲೀ ಮೌನ ತುಂಬಿದ ಭಕ್ತಿಯಾಗಲಿ ಬೇಕಿಲ್ಲ. ತನ್ನ ಜನರು ಇತರರೊಂದಿಗೆ ತೊಡಗಿಕೊಂಡವರಾಗಿ ವಿಶೇಷವಾಗಿ ಶೋಷಿತರ ಮತ್ತು ತಿರಸ್ಕಾರಕ್ಕೆ ಗುರಿಯಾದವರಿಗೆ ಸಹಾಯಕರಾಗಿರುವುದನ್ನು ನೋಡಲು ದೇವರು ಬಯಸುತ್ತಾನೆ.

ಯೆಶಾಯನು ಇದನ್ನು 58:13,14ನೇ ವಚನಗಳಲ್ಲಿ ಸರಳವಾಗಿ ಹೇಳುತ್ತಾನೆ. "ನೀವು ಸಬ್ಬತ್ ದಿನವನ್ನು ಅಗಮ್ಯವಾದದ್ದೆಂದು ತಿಳಿದು ಆ ನನ್ನ ಪರಿಶುದ್ಧ ದಿವಸದಲ್ಲಿ ನಿಮ್ಮ ನಿತ್ಯದ ಕೆಲಸವನ್ನು ಮಾಡದೆ ಸ್ವೇಚ್ಛೆಯಾಗಿ ನಡೆಯದೆ ಸ್ವಕಾರ್ಯದಲ್ಲಿ ನಿರತರಾಗದೆ ಹರಟೆ ಹರಟದೆ ಯೆಹೋವನ ಸಬ್ಬತ್ತೆಂಬ ಪರಿಶುದ್ಧ ದಿನವು ಉಲ್ಲಾಸಕರವೂ ಮಾನ್ಯವೂ ಆದದ್ದೆಂದು ಘನಪಡಿಸಿದರೆ ಆಗ ನೀವು ಯೆಹೋವನಲ್ಲಿ ಉಲ್ಲಾಸ ಪಡುವಿರಿ, ಮತ್ತು ನಾನು ನಿಮ್ಮನ್ನು ಭೂಮಿಯ ಎತ್ತರವಾದ ಪ್ರವೇಶಗಳಲ್ಲಿ ಹತ್ತಿಸಿ ನಿಮ್ಮ ಪಿತೃವಾದ ಯಾಕೋಬನ ಸ್ವಾಸ್ತ್ಯವನ್ನು ನೀವು ಅನುಭವಿಸುವಂತೆ ಮಾಡುವೆನು. ಯೆಹೋವನೆ ಇದನ್ನು ನುಡಿದಿದ್ದಾನೆ.

ನಾವು ನಮ್ಮ ಭೋಗಕಾರ್ಯಗಳಲ್ಲಿ ತೊಡಗಿಕೊಳ್ಳುವುದು ನಮ್ಮ ಸ್ವಹಿತಕ್ಕೆ ಪ್ರಾಮುಖ್ಯತೆ ಕೊಡುವುದು ದೇವರ ಸಬ್ಬತ್ತನ್ನು ಉಲ್ಲಂಘಿಸಿದುದಕ್ಕೆ ಸಮಾನವಾಗುತ್ತದೆ. ಮನುಷ್ಯನ ಕಾರ್ಯಸೂಚಿಯು ಯಾವಾಗಲೂ ದೇವರ ಸಬ್ಬತ್ತಿಗೆ ಪೂರಕವಾದ ಭಾಗವಾಗಿರುವುದಿಲ್ಲ. ಯಾರ್‍ಯಾರು ಕಷ್ಟದಲ್ಲಿ ಸಿಕ್ಕಿಹಾಕಿಕೊಂಡಿದ್ದಾರೋ ಬಂಧನಕ್ಕೊಳಗಾಗಿದ್ದರೋ ಹಸಿದಿರುವವರೋ ಬೆತ್ತಲೆಯಾಗಿರುವವರೋ ಕತ್ತಲೆಯಲ್ಲಿರುವವರೋ ಹೇಳ ಹೆಸರಿಲ್ಲದವರೋ ಅಂಥವರನ್ನು ಹುಡುಕಿ ರಕ್ಷಿಸಲು ದೇವರು ನಮ್ಮನ್ನು ಆಮಂತ್ರಿಸುತ್ತಾನೆ.

ವಾರದ ಇನ್ನಿತರ ದಿನಗಳಿಗಿಂತ ಸಬ್ಬತ್ತಿನ ಹೆಚ್ಚಾಗಿ ಬೇರೆಯ ಜನರ ಜೊತೆ ಬೆರೆಯಬೇಕು. ನಮ್ಮ ತನವನ್ನು ಮರೆತು ನಮ್ಮ ಸ್ವಾರ್ಥವನ್ನು ಬಿಟ್ಟು ನಮ್ಮ ಅಗತ್ಯಗಳ ಬಗ್ಗೆ ಹೆಚ್ಚು ಗಮನ ಕೊಡದೆ ಇತರರ ಅಗತ್ಯಗಳ ಬಗ್ಗೆ ಹೆಚ್ಚು ಗಮನ ಹರಿಸಬೇಕು.

**ಗುರುವಾರ** **ಸೆಪ್ಟೆಂಬರ್ 2**

## ನಾವು ದೇವರಿಗೆ ಸೇರಿದವರು ಎಂಬುದರ ಗುರುತು

ಪ್ರಪಂಚದ ಎರಡನೇ ಮಹಾಯುದ್ಧದಲ್ಲಿ ಇಂಗ್ಲೆಂಡ್ ದೇಶವು ಜರ್ಮನಿಯ ಅಪಾಯಕರ ಆಕ್ರಮಣವನ್ನು ಎದುರು ನೋಡುತ್ತಿತ್ತು. ದ್ವೀಪವನ್ನು ರಕ್ಷಿಸಿಕೊಳ್ಳಲು ಸಾಕಷ್ಟು ಸಿದ್ಧತೆಗಳು ನಡೆಯುತ್ತಿದ್ದವು ಇಂಗ್ಲೆಂಡಿನ ಅಧಿಕಾರಿಗಳು ಒಂದು ಚಮತ್ಕಾರವನ್ನು ಮಾಡಿದರು. ಹೆಚ್ಚುವರಿ ಅಡೆತಡೆಗಳನ್ನು ಸಮುದ್ರದ ಕರಾವಳಿಯುದ್ದಕ್ಕೂ, ವೈರಿಯು ಶೀಘ್ರವಾಗಿ ತಮ್ಮ ಗುರಿಯತ್ತ ತಲುಪಲು ಸಹಾಯ ಮಾಡುವ ರಸ್ತೆಯುದ್ದಕ್ಕೂ ನಿಲ್ಲಿಸಲಾಯ್ತು. ಆಯಕಟ್ಟಿನ ಸ್ಥಳಗಳಲ್ಲಿ ನಿರ್ಬಂಧಕಗಳನ್ನು ಸ್ಥಾಪಿಸಲಾಯ್ತು. ಶತ್ರುವನ್ನು ಗೊಂದಲಕ್ಕೀಡು ಮಾಡಲು ರೈಲಿನ ಎಲ್ಲಾ ಸೂಚನ ಫಲಕಗಳನ್ನು ತೆಗೆದರು, ರಸ್ತೆಯುದ್ದಕ್ಕೂ ಸಂಚಾರ ಚಿಹ್ನೆಗಳು ಕೊರೆಯಲ್ಪಟ್ಟಿದ್ದ ಕಲ್ಲುಗಳನ್ನು ತೆಗೆದುಹಾಕಲು ಆಗಲಿಲ್ಲ, ಆದರೆ ಅವುಗಳನ್ನು ಸೀಮೆಂಟ್‌ನಿಂದ ಮುಚ್ಚಿದರು.

ಸೂಚನಾ ಗುರುತುಗಳು ಬಹಳ ಮಹತ್ವವುಳ್ಳವುಗಳಾಗಿವೆ. ಅವುಗಳು ನಮಗೆ ಮಾರ್ಗದರ್ಶನ ನೀಡುತ್ತದೆ. ಇಂದು ಉಪಗ್ರಹ ಆಧಾರಿತ ಜಿ.ಪಿ.ಎಸ್. ನಕ್ಷೆಯ ವ್ಯವಸ್ಥೆ ಬಳಕೆಯಲ್ಲಿದೆ. ನಾವೆಲ್ಲರೂ ಇದನ್ನು ಬಳಸುವಾಗ ಸೂಚನೆಗಳನ್ನು ಅನುಸರಿಸುತ್ತೇವೆ.

ಸಬ್ಬತ್ತು ಯಾವುದಕ್ಕೆ ಗುರುತಾಗಿದೆ? ವಿ.ಕಾಂಡ 31:13,16,17ನ್ನು ಓದಿರಿ. ಇಲ್ಲಿ ಹೇಳಿರುವುದನ್ನು ಇಂದು, ದೇವರ ಕಟ್ಟಳೆಗಳ ನಿರಂತರತೆಯಲ್ಲಿ (ಶಾಶ್ವತತೆಯಲ್ಲಿ) ನಂಬಿಕೆ ಇಟ್ಟುವರಾದ ನಾವು ನಮಗೆ ಹೇಗೆ ಅನ್ವಯ ಮಾಡಿಕೊಳ್ಳಬಹುದು?

ಈ ವಾಕ್ಯಗಳು ಪ್ರಾಚೀನ ಇಸ್ರಾಯೇಲ್ಯರನ್ನು ಕುರಿತು ಹೇಳುತ್ತಿವೆಯಾದರೂ, ಕ್ರಿಸ್ತನಲ್ಲಿರುವ ನಾವು ಅಬ್ರಹಾಮನ ಸಂತತಿಯವರಾಗುತ್ತೇವೆ, ವಾಗ್ದಾನಕ್ಕನುಸಾರವಾಗಿ

ಬಾಧ್ಯರೂ ಆಗುತ್ತೇವೆ ಮತ್ತು ಸಬ್ಬತ್ತು ಇಂದಿಗೂ ಸಹಾ ದೇವರ ಮತ್ತು ಆತನ ಜನರ ಮಧ್ಯೆ ಗುರುತಾಗಿ ಉಳಿದಿದೆ. ವಿಮೋಚನಕಾಂಡ 31ನೇ ಅಧ್ಯಾಯವು ಸಬ್ಬತ್ತು ದೇವರ ಶಾಶ್ವತ ಒಡಂಬಡಿಕೆಗೆ ಗುರುತಾಗಿದೆ ಎಂದು ತಿಳಿಸುತ್ತದೆ (ವಿ.ಕಾಂಡ 31:16,17). ಈ ಗುರುತು ನಮ್ಮ ಸೃಷ್ಟಿಕರ್ತನನ್ನು, ನಮ್ಮ ವಿಮೊಚಕನನ್ನು ಮತ್ತು ಪರಿಶುದ್ಧ ಪಡಿಸುವಾತನನ್ನು ಅರಿತುಕೊಳ್ಳಲು ನಮಗೆ ಸಹಾಯ ಮಾಡುತ್ತದೆ. ಪ್ರತಿ ಏಳು ದಿನಗಳಿಗೊಮ್ಮೆ ಏರಿಸಲ್ಪಡುವ ಬಾವುಟದಂತೆ ಸಬ್ಬತ್ತು ನಮಗೆ ನೆನಪಿಸುವ ಕಾರ್ಯವನ್ನು ಮಾಡುತ್ತದೆ. ಯಾಕೆಂದರೆ ಮನುಷ್ಯರಾದ ನಾವು ಮರೆಯುವ ಸ್ವಭಾವ ಹೊಂದಿದ್ದೇವೆ.

ದೇವರ ಸಬ್ಬತ್ತು ನಮಗೆ ನಮ್ಮ ಮೂಲವನ್ನು, ನಮ್ಮ ಬಿಡುಗಡೆಯನ್ನು, ನಮ್ಮ ಮುಂದಿನ ಗತಿಯನ್ನು ಮತ್ತು ತಪ್ಪಿಹೋದ ಶೋಷಿತ ಜನರ ಮೇಲಿನ ನಮ್ಮ ಜವಾಬ್ದಾರಿಯನ್ನು ನೆನಪಿಸುವ 'ಸ್ಥಿರವಾದ ಜ್ಞಾಪನೆ'ಯಾಗಿದೆ. ವಾಸ್ತವವಾಗಿ ಸಬ್ಬತ್ತು ನಮಗೆ ಬಹಳ ಮುಖ್ಯವಾಗಿದ್ದು ನಾವು ಅದರ ಬಳಿಗೆ ಹೋಗುವುದಿಲ್ಲ. ಅದು ಪ್ರತಿವಾರವು ತಪ್ಪದೆ ನಮ್ಮ ಬಳಿಗೆ ಬರುತ್ತದೆ.

ನಾವು ಯಾರು, ನಮ್ಮನ್ನು ಸೃಷ್ಟಿಸಿದವರು ಯಾರು, ಆತನು ನಮಗಾಗಿ ಏನು ಮಾಡುತ್ತಿದ್ದಾನೆ, ಮತ್ತು ನೂತನ ಭೂಮ್ಯಾಕಾಶಗಳನ್ನು ಮಾಡುವಾಗ ಅಂತಿಮವಾಗಿ ನಮಗೆ ಏನು ಮಾಡುತ್ತಾನೆಂಬುದನ್ನು ನೆನಪಿಸುವ ಶಾಶ್ವತ ಗುರುತು– ಸಬ್ಬತ್ತು.

ಮಾರ್ಗತಪ್ಪಿದ ಸೃಷ್ಟಿಯ ಮತ್ತು ಸೃಷ್ಟಿಕರ್ತನ ನಡುವೆ ಇರುವ ರಕ್ಷಣಾ ಸಂಬಂಧವನ್ನು ನಾವು ವಾಸ್ತವವಾಗಿ ಪರಿಗಣಿಸಬೇಕು. ಅದಕ್ಕಾಗಿ ಪರಿಶುದ್ಧನಾದ ದೇವರು ಒಡಂಬಡಿಕೆಯ ಪಾಲುದಾರರಾದ ಮನುಷ್ಯರನ್ನು ಕರೆಯುತ್ತಾನೆ. ಪ್ರತಿವಾರವು ದೇವರಿಂದ ಬರುವ ಬಲ್ಮೆ ಮತ್ತು ಅಧಿಕಾರದಿಂದ ಕ್ರಿಸ್ತನಲ್ಲಿ ಉಚಿತವಾಗಿ ದಯಪಾಲಿಸಿದ ವಿಶ್ರಾಂತಿಗೆ ಪ್ರವೇಶ ಹೊಂದಲು ನಮಗೆ ಆಜ್ಞೆಯಾಗಿದೆ, ಆತನೇ ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆಗಿದ್ದು ಮುಂದೆ ಇಟ್ಟಿರುವ ಸಂತೋಷಕ್ಕೆ ಶಿಲುಬೆಯ ಮರಣವನ್ನು ಸಹಿಸಿಕೊಂಡನು (ಇಬ್ರಿಯ 12:2).

ಸಬ್ಬತ್ತಿನ ವೇಳೆ ದೇವರೊಂದಿಗೆ ಆಳವಾದ ಅನುಭವವನ್ನು ಹೊಂದಲು ಹೇಗೆ ಕಲಿತುಕೊಳ್ಳುವಿರಿ?

**ಶುಕ್ರವಾರ** **ಸೆಪ್ಟೆಂಬರ್ 3**

**ಹೆಚ್ಚಿನ ಚಿಂತನೆ :** "ನಾವು ವಾರದ ಎಲ್ಲಾ ದಿನಗಳಲ್ಲೂ ಸಬ್ಬತ್ತನ್ನು ಮನಸ್ಸಿನಲ್ಲಿಟ್ಟುಕೊಂಡು ಆಜ್ಞಾನುಸಾರವಾಗಿ ಸಬ್ಬತ್ತನ್ನು ಕೈಗೊಳ್ಳುವುದಕ್ಕೆ ಬೇಕಾದ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿರಬೇಕು. ನಾವು ಕೇವಲ ನೇಮಬದ್ಧವಾಗಿ ಸಬ್ಬತ್ತನ್ನು ಕೈಗೊಂಡು ನಡೆಯಬಾರದು"– ಎಲೆನ್ ಜಿ ವೈಟಮ್ಮನವರ ಟೆಸ್ಟಿಮೋನಿಸ್ ಫಾರ್ ದಿ ಚರ್ಚ್, ಸಂಪುಟ 6, ಪುಟ 353.

"ಇಡೀ ಪರಲೋಕವೇ ಸಬ್ಬತ್ತನ್ನು ಕೈಗೊಳ್ಳುತ್ತದೆ. ಬಹಳ ಸಂಭ್ರಮೋತ್ಸಾಹಗಳಿಂದ ಕೈಗೊಳ್ಳುತ್ತದೆ, ಎಂದಿಗೂ ನಿರುತ್ಸಾಹವಿಲ್ಲ ಆಲಸ್ಯವಿಲ್ಲ; ಈ ದಿನದಲ್ಲಿ ವ್ಯಕ್ತಿಯ ಪೂರ್ಣಶಕ್ತಿಯು ಎಚ್ಚರಗೊಳ್ಳಬೇಕು, ಯಾಕೆಂದರೆ ನಾವು ಭೇಟಿಯಾಗುವುದು ದೇವರನ್ನು ಮತ್ತು ಯೇಸುಕ್ರಿಸ್ತನನ್ನು ಅಲ್ಲವೇ? ನಾವು ಆತನನ್ನು ನಂಬಿಕೆಯಿಂದ ದೃಷ್ಟಿಸಬಹುದು. ಆತನು ಪ್ರತಿ ಆತ್ಮವನ್ನು ಆಶೀರ್ವದಿಸಲು ಮತ್ತು ಉತ್ತೇಜನ ಪಡಿಸಲು ಬಯಸುತ್ತಾನೆ" – ಟೆಸ್ಟಿಮೋನಿಸ್ ಫಾರ್ ದಿ ಚರ್ಚ್, 6ನೇ ಸಂಪುಟ, 362ನೇ ಪುಟ.

ಸಬ್ಬತ್ತಿನ ದಿನದಲ್ಲಿ ದೇವರ ಮೇಲೆ ಬರುವ ಬೇಡಿಕೆಗಳು ಬೇರೆ ದಿನಗಳಿಗಿಂತ ದೊಡ್ಡದಾಗಿರುತ್ತವೆ. ಜನರು ತಮ್ಮ ಉದ್ಯೋಗವನ್ನು ತೊರೆದು ತಮ್ಮ ಸಮಯವನ್ನು ಧ್ಯಾನ ಪ್ರಾರ್ಥನೆ ಆರಾಧನೆಗಳಲ್ಲಿ ಕಳೆಯುತ್ತಾರೆ. ಅವರು ಉಳಿದ ದಿನಗಳಿಗಿಂತ ಆ ದಿನ ಹೆಚ್ಚಿನ ಅನುಗ್ರಹಕ್ಕಾಗಿ ಬೇಡಿಕೊಳ್ಳುತ್ತಾರೆ.

ಆತನ ವಿಶೇಷ ಗಮನವನ್ನು ಹೆಚ್ಚಾಗಿ ಬೇಡುತ್ತಾರೆ. ಆತನ ವಿಶೇಷವಾದ ಆಶೀರ್ವಾದಗಳನ್ನು ಕೋರುತ್ತಾರೆ. ದೇವರು ಈ ಆಶೀರ್ವಾದಗಳನ್ನು ಕೊಡದೆ ಸಬ್ಬತ್ತು ಸರಿದುಹೋಗಲು ಬಿಡುವುದಿಲ್ಲ. ಪರಲೋಕವು ಎಂದಿಗೂ ತನ್ನ ಕೆಲಸವನ್ನು ನಿಲ್ಲಿಸಿ ಬಿಡುವುದಿಲ್ಲ. ಮನುಷ್ಯರು ಒಳ್ಳೆಯ ಕೆಲಸವನ್ನು ಎಂದಿಗೂ ನಿಲ್ಲಿಸಬಾರದು. ಸಬ್ಬತ್ತು ಎಂದಿಗೂ ವ್ಯರ್ಥಕಾರ್ಯಗಳನ್ನು ಸಾಧಿಸುವ ಅವಧಿಯಲ್ಲ. ಧರ್ಮಶಾಸ್ತ್ರವು ನಾವು ನಮ್ಮ ಉದ್ಯೋಗವನ್ನು ನಡೆಸಬಾರದೆಂದು ನಿಷೇಧಮಾಡುತ್ತದೆ. ನಮ್ಮ ಜೀವನೋಪಾಯಕ್ಕಾಗಿ ಮಾಡುವ ಕೆಲಸವನ್ನು ನಾವು ನಿಲ್ಲಿಸಬೇಕು. ನಾವು ಭೋಗಾಸಕ್ತಿಯಿಂದಾಗಲೀ, ಲಾಭಕ್ಕಾಗಲೀ ಸಬ್ಬತ್ತಿನಲ್ಲಿ ಮಾಡುವ ಕೆಲ ಸಲವನ್ನು ಧರ್ಮಶಾಸ್ತ್ರವು ನಿಷೇಧಿಸುತ್ತದೆ. ದೇವರು ಹೇಗೆ ತನ್ನ ಸೃಷ್ಟಿಕಾರ್ಯವನ್ನು ನಿಲ್ಲಿಸಿ

ವಿಶ್ರಾಂತಿ ಪಡೆದುಕೊಂಡನೋ ಹಾಗೆಯೇ ಮನುಷ್ಯನು ತನ್ನ ದೈನಂದಿನ ಕೆಲಸಗಳನ್ನು ನಿಲ್ಲಿಸಬೇಕು. ನಾವು ಆರೋಗ್ಯಕರವಾದ ವಿಶ್ರಾಂತಿಗೆ ಆರಾಧನೆಗೆ ಮತ್ತು ಪವಿತ್ರ ಕಾರ್ಯಗಳಿಗೆ ನಮ್ಮ ಸಮರ್ಪಿಸಿಕೊಳ್ಳಬೇಕು. ಯೇಸುಕ್ರಿಸ್ತನು ರೋಗಿಗಳನ್ನು ಸ್ವಸ್ಥಪಡಿಸುತ್ತಿದ್ದುದು ಧರ್ಮಶಾಸ್ತ್ರಾನುಸಾರವಾಗಿ ಪರಿಪೂರ್ಣವಾದು–ದಾಗಿತ್ತು. ಅದು ಸಬ್ಬತ್ತನ್ನು ಘನಪಡಿಸಿತು" ಶ್ರೀಮತಿ ಎಲೆನ್ ಜಿ ವೈಟಮ್ಮನವರ ದಿ ಡಿಸೈರ್ ಆಫ್ ಏಜಸ್ 207ನೇ ಪುಟ.

## ಚರ್ಚಿಸಬೇಕಾದ ಪ್ರಶ್ನೆಗಳು

1. ಪರಿಸರ ಸಂರಕ್ಷಣೆ ಅನೇಕ ದೇಶಗಳಲ್ಲಿ ರಾಜಕೀಯ ಚರ್ಚೆಗಳಾಗಿದೆ. ಅಡ್ವೆಂಟಿಸ್ಟರಾಗಿ ನಾವು ಆಗ ನಮ್ಮ ಪರಿಸರ ಸಂರಕ್ಷಿಸುವ ಪಾರುಪತ್ಯಗಾರರಾಗಿದ್ದೇವೆ?

2. ಸೇವೆಯು ಮನಸ್ಸಿನಲ್ಲಿ ಆರಂಭವಾಗುತ್ತದೆ. ನಾವು ನಮ್ಮ ಕುಟುಂಬಸ್ಥರಿಗೆ, ಸಭೆಗಳಿಗೆ, ಸಮುದಾಯಗಳಿಗೆ ಆಸಕ್ತಿಯಿಂದ ಹೇಗೆ ಸೇವೆ ಸಲ್ಲಿಸುವ ಮನೋಭಾವವನ್ನು ಬೆಳೆಸಿಕೊಳ್ಳಬಹುದು? ಸಬ್ಬತ್ತು ನಮಗೆ ಹೆಚ್ಚಿನ ಅವಕಾಶಗಳನ್ನು ಒದಗಿಸಿಕೊಡುತ್ತದೆ ಹೇಗೆ?

3. ಪ್ರತಿ ಸಬ್ಬತ್ತು ನಮಗೆ ಮನುಷ್ಯನು ದೇವರಿಂದ ಸೃಷ್ಟಿಯಾದನು ಎಂಬುದನ್ನು ನೆನಪಿಗೆ ತರುತ್ತದೆ. ಜನರನ್ನು ದೇವರ ದೃಷ್ಟಿಯಿಂದ ನೋಡಲು ಸಹಾಯ ಮಾಡುತ್ತದೆ. ಮನುಷ್ಯರು ದೇವರ ಸ್ವರೂಪದಲ್ಲಿ ಉಂಟಾಗಿರಲಾಗಿ ಮತ್ತು ಅವರ ದೇವರ ಪ್ರೀತಿಗೆ ಗುರಿಯಾದವರು ಆಗಿರುವುದರಿಂದ, ವರ್ಣಭೇದ, ಜನಾಂಗೀಯ ವ್ಯತ್ಯಾಸ, ಆರ್ಥಿಕ ಮುಖ್ಯ ಇವೆಲ್ಲವೂ ಸಬ್ಬತ್ತು ಕೈಗೊಳ್ಳುವವರಿಗೆ ಅಸಂಗತವಾಗಿವೆ ಹೇಗೆ?